# ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ

ಮಲ್ಲೇಶ್ವರಂ, ಬೆಂಗಳೂರು–560003.

# KARNATAKA SECONDARY EDUCATION EXAMINATION BOARD

Malleshwaram, Bengaluru – 560003.

## 2021-22 MODEL QUESTION PAPER

**Subject : SOCIAL SCIENCE/ಸಮಾಜ ವಿಜ್ಞಾನ** **Subject Code : 85K**
**Time : 3 hrs. 15 mins.** **Max. Marks : 80**

**ಕನ್ನಡ ಮಾಧ್ಯಮ**

**ಶಾಲಾ ಅಭ್ಯರ್ಥಿಗಳಿಗಾಗಿ**

---

***ಪರೀಕ್ಷಾರ್ಥಿಗಳಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ 38 ಪ್ರಶ್ನೆಗಳನ್ನು ಹೊಂದಿದೆ.
2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವೂ ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

**I ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ. 8x1=8**

**1. ಸಹಾಯಕ ಸೈನ್ಯ ಪದ್ಧತಿಯನ್ನು ಜಾರಿಗೆ ತಂದವರು**

ಎ) ಡಾಲ್‌ಹೌಸಿ ಬಿ) ವೆಲ್ಲೆಸ್ಲಿ

ಸಿ) ಕಾರ್ನ್‌ವ್ಯಾಲಿಸ್ ಡಿ) ವಿಲಿಯಂ ಬೆಂಟಿಂಕ್

**2. ಕಾನ್ಪುರದಲ್ಲಿ ಬ್ರಿಟಿಷರ ವಿರುದ್ಧ ಸಿಡಿದೆದ್ದ ನಾಯಕ**

ಎ) ಮಂಗಲ್ ಪಾಂಡೆ ಬಿ) ದೋಂಡಿಯಾ ವಾಘ

ಸಿ) ನಾನಾ ಸಾಹೇಬ ಡಿ) ಎರಡನೇ ಬಹದ್ದೂರ್ ಷಾ

**3. ಮಾನವ ಹಕ್ಕುಗಳ ದಿನವನ್ನು ಆಚರಿಸುವುದು**

ಎ) ಡಿಸೆಂಬರ್ 10ರಂದು ಬಿ) ಮಾರ್ಚ್ 15ರಂದು

ಸಿ) ಜೂನ್ 6ರಂದು ಡಿ) ಜುಲೈ 11ರಂದು

**4. ಕೈಗಾ ಅಣು ಸ್ಥಾವರ ವಿರೋಧಿ ಚಳವಳಿಯ ನೇತೃತ್ವ ವಹಿಸಿದ್ದವರು**

ಎ) ಡಾ. ಶಿವರಾಂ ಕಾರಂತ್ ಬಿ) ಸುಂದರಲಾಲ್ ಬಹುಗುಣ

ಸಿ) ಕುಸುಮಾ ಸೊರಬ ಡಿ) ಪ್ರೊ.ಎಂ. ಡಿ. ನಂಜುಂಡಸ್ವಾಮಿ

**5. ಮೂಕನಾಯಕ ಪತ್ರಿಕೆಯನ್ನು ಪ್ರಾರಂಭಿಸಿದವರು**

ಎ) ಮಹಾತ್ಮ ಗಾಂಧಿ ಬಿ) ಬಾಲಗಂಗಾಧರ್ ತಿಲಕ್

ಸಿ) ಡಾ. ಬಿ.ಆರ್. ಅಂಬೇಡ್ಕರ್ ಡಿ) ಜ್ಯೋತಿಭಾ ಫುಲೆ

**6. ಭಾರತದಲ್ಲಿ ಅತಿ ಕಡಿಮೆ ಮಳೆ ಪಡೆಯುವ ಸ್ಥಳ**

ಎ) ರೂಯ್ಲಿ ಬಿ) ಮಾಸಿನ್‌ರಾಮ್

ಸಿ) ಆಗುಂಬೆ ಡಿ) ಕುದುರೆಮುಖ

**7. ಭಾರತದ ನೈಜ ಅಭಿವೃದ್ಧಿ ಎಂದರೆ ಅದು ಗ್ರಾಮಗಳ ಅಭಿವೃದ್ಧಿ ಎಂದು ಹೇಳಿದವರು**

ಎ) ಡಾ. ಬಿ.ಆರ್. ಅಂಬೇಡ್ಕರ್ ಬಿ) ಜವಾಹರ್ ಲಾಲ್ ನೆಹರು

ಸಿ) ಅಮರ್ತ್ಯ ಸೇನ್ ಡಿ) ಮಹಾತ್ಮ ಗಾಂಧಿ

**8. ವಿಪ್ರೋ ಸಂಸ್ಥೆಯ ಸಂಸ್ಥಾಪಕರು**

ಎ) ಅಜಿಮ್ ಪ್ರೇಮ್‌ಜಿ ಬಿ) ನಾರಾಯಣಮೂರ್ತಿ

ಸಿ) ಡಾ. ಪ್ರತಾಪ್ ರೆಡ್ಡಿ ಡಿ) ಕಿರಣ್ ಮಜುಮ್‌ದಾರ್ ಷಾ

**II ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ. 8x1=8**

9. ಎರಡನೆಯ ಷಾ ಆಲಂನು ಕೋರ ಮತ್ತು ಅಲಹಾಬಾದ್‌ಗಳನ್ನು ಮರಾಠರಿಗೆ ನೀಡಿದ್ದರಿಂದಾದ ಪರಿಣಾಮವೇನು?
10. ವರ್ನ್ಯಾಕುಲರ್ ಪ್ರೆಸ್ ಕಾಯ್ದೆಯನ್ನು ಏಕೆ ಜಾರಿಗೊಳಿಸಲಾಯಿತು?
11. ನಿಶಸ್ತ್ರೀಕರಣ ಎಂದರೇನು?
12. ಸಾಮಾಜಿಕ ಭದ್ರತೆ ಏನನ್ನು ಒಳಗೊಂಡಿದೆ?
13. ಮಾವಿನ ಹೂಯ್ಲು ಎಂದರೇನು?
14. ಕೆಂಪು ಮಣ್ಣು ಹೇಗೆ ಉತ್ಪತ್ತಿಯಾಗಿದೆ?
15. ಅಧಿಕಾರ ವಿಕೇಂದ್ರೀಕರಣ ಎಂದರೇನು?
16. ಬಿಳಿ ಕ್ರಾಂತಿಯ ಪಿತಾಮಹ ಯಾರು?

**III ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ. 8x2=16**

17. ಕಾನ್‌ಸ್ಟಾಂಟಿನೋಪಲ್ ನಗರದ ವಶವು ಭಾರತಕ್ಕೆ ಹೊಸ ಜಲಮಾರ್ಗ ಕಂಡು ಹಿಡಿಯುವಂತಾಯಿತು. ಸಮರ್ಥಿಸಿ.
18. ಜುನಾಘಡವು ಭಾರತದ ಒಕ್ಕೂಟದಲ್ಲಿ ಹೇಗೆ ಸೇರ್ಪಡೆಯಾಯಿತು?
19. ಭಾರತದ ವಿದೇಶಾಂಗ ನೀತಿಯ ಗುರಿಗಳಾವುವು?

ಅಥವಾ

ದ್ವಿತೀಯ ಮಹಾಯುದ್ಧದ ಬಳಿಕ ಎದುರಾದ ಮುಖ್ಯ ಸಮಸ್ಯೆಗಳು ಯಾವುವು?

20. ನರ್ಮದಾ ಬಚಾವೋ ಆಂದೋಲನವನ್ನು ಏಕೆ ಆರಂಭಿಸಲಾಯಿತು?

ಅಥವಾ

ಆರ್ಥಿಕ ಶ್ರಮವಿಭಜನೆ ಮತ್ತು ಸಾಮಾಜಿಕ ಶ್ರಮ ವಿಭಜನೆಯನ್ನು ವ್ಯತ್ಯಯಿಸಿ.

21. ಪರ್ಯಾಯ ಪ್ರಸ್ಥಭೂಮಿಯು ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸಿದೆ. ಹೇಗೆ?

22. ಅರಣ್ಯನಾಶಕ್ಕೆ ಕಾರಣಗಳನ್ನು ಪಟ್ಟಿ ಮಾಡಿ.

23. ದೇಶದ ಆರ್ಥಿಕ ಅಭಿವೃದ್ಧಿಯನ್ನು ಅಳೆಯಲು ರಾಷ್ಟ್ರೀಯ ವರಮಾನವು ಸೂಕ್ತವಾದುದಲ್ಲ. ಏಕೆ?

24. 1986ರ ಗ್ರಾಹಕ ಸಂರಕ್ಷಣಾ ಕಾಯ್ದೆಯ ಮುಖ್ಯ ಉದ್ದೇಶಗಳು ಯಾವುವು?

**IV ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಆರು ಅಂಶಗಳಲ್ಲಿ/ವಾಕ್ಯಗಳಲ್ಲಿ ಉತ್ತರಿಸಿ. 9x3=27**

25. ಭಾರತದಲ್ಲಿ ಬ್ರಿಟಿಷ್ ಶಿಕ್ಷಣದ ಪರಿಣಾಮಗಳನ್ನು ವಿವರಿಸಿ.

26. 3ನೇ ಆಂಗ್ಲೋ–ಮೈಸೂರು ಯುದ್ಧದ ಫಲಿತಾಂಶಗಳೇನು?

ಅಥವಾ

ಅಸಹಕಾರ ಚಳವಳಿಯ ಪ್ರಮುಖ ಕಾರ್ಯಕ್ರಮಗಳಾವುವು?

27. ಬ್ರಹ್ಮಸಮಾಜದ ಬೋಧನೆಗಳಾವುವು?

28. ಭಾರತ ಮತ್ತು ರಷ್ಯಾಗಳ ನಡುವಿನ ಸಂಬಂಧವನ್ನು ವಿವರಿಸಿ.

29. ಅಸ್ಪೃಶ್ಯತೆಯ ನಿವಾರಣೆಗಾಗಿ ಕೈಗೊಂಡಿರುವ ಕಾನೂನು ಕ್ರಮಗಳನ್ನು ವಿವರಿಸಿ.

30. ಕೈಗಾರಿಕೆಗಳು ಕೆಲವೊಂದು ಪ್ರದೇಶಗಳಲ್ಲಿ ಮಾತ್ರ ಸ್ಥಾನಿಕರಣಗೊಂಡಿವೆ. ಏಕೆ?

31. ಭೂಕುಸಿತದ ಪರಿಣಾಮಗಳನ್ನು ವಿವರಿಸಿ.

ಅಥವಾ

ಸಾರಿಗೆಯ ಪ್ರಾಮುಖ್ಯತೆಯನ್ನು ವಿವರಿಸಿ.

32. ಪಂಚಾಯತ್ ರಾಜ್ ವ್ಯವಸ್ಥೆಯ ಪ್ರಮುಖ ಲಕ್ಷಣಗಳನ್ನು ತಿಳಿಸಿ.

ಅಥವಾ

ಆರ್ಥಿಕ ಅಭಿವೃದ್ಧಿಯ ಉದ್ದೇಶಗಳನ್ನು ತಿಳಿಸಿ.

33. ಬ್ಯಾಂಕಿನ ಕಾರ್ಯಗಳು ಯಾವುವು?

ಅಥವಾ

ಉದ್ಯಮಿಯ ಕಾರ್ಯಗಳು ಯಾವುವು?

**V ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಸುಮಾರು ಎಂಟು ವಾಕ್ಯಗಳಲ್ಲಿ ಉತ್ತರಿಸಿ. 4x4=16**

34. ಸ್ವಾತಂತ್ರ್ಯ ಹೋರಾಟದ ಅವಧಿಯಲ್ಲಿ ಸುಭಾಷ್ ಚಂದ್ರ ಬೋಸ್ ಅವರು ಬ್ರಿಟಿಷರ ವಿರುದ್ಧ ಹೇಗೆ ಹೋರಾಡಿದರು?

35. ಸ್ವಾತಂತ್ರ್ಯ ಹೋರಾಟದಲ್ಲಿ ಮಂದಗಾಮಿಗಳ ಪಾತ್ರವನ್ನು ವಿವರಿಸಿ.

ಅಥವಾ

1857ರ ಕ್ರಾಂತಿಗೆ ಕಾರಣವಾದ ಅಂಶಗಳನ್ನು ವಿವರಿಸಿ.

36. ಭಾರತದಲ್ಲಿ ಮಹಿಳೆಯರ ಸ್ಥಾನಮಾನ ಉತ್ತಮಪಡಿಸಲು ಕೈಗೊಂಡಿರುವ ಕ್ರಮಗಳೇನು?

37. ಭಾರತದಲ್ಲಿ ರೂಢಿಯಲ್ಲಿರುವ ವಿವಿಧ ಬಗೆಯ ಕೃಷಿ ವಿಧಾನಗಳನ್ನು ಪಟ್ಟಿ ಮಾಡಿ.

**V** 38. ಭಾರತದ ನಕ್ಷೆಯನ್ನು ಬರೆದು, ಅದರಲ್ಲಿ ಈ ಕೆಳಗಿನವುಗಳನ್ನು ಗುರುತಿಸಿ: **4x1+1=5**

ಎ) $82\frac{1}{2}^{0}$ ಪೂರ್ವ ರೇಖಾಂಶ

ಬಿ) ಭಾಕ್ರನಂಗಲ್ ನದಿ ಕಣಿವೆ ಯೋಜನೆ

ಸಿ) ನರ್ಮದಾ ನದಿ

ಡಿ) ವಿಶಾಖಪಟ್ಟಣ

ದೃಷ್ಟಿ ವಿಕಲಚೇತನ ವಿದ್ಯಾರ್ಥಿಗಳಿಗೆ ಪರ್ಯಾಯ ಪ್ರಶ್ನೆ

(ಪ್ರಶ್ನೆ ಸಂಖ್ಯೆ 38ರ ಬದಲಿಗೆ)

* ವಿವಿದೋದ್ದೇಶ ನದಿ ಕಣಿವೆ ಯೋಜನೆಗಳ ಪ್ರಮುಖ ಉದ್ದೇಶಗಳು ಯಾವುವು?

-●-●-●-